ಬೆಳಗಾವಿ ನಗರ ಸಭೆ ಅಂಗೀಕರಿಸಿದ ನಿರ್ಣಯ

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ, ನಾನು ಗಮನ ಸೆಳೆಯುವುದಕ್ಕೆ ಮುಂಚೆ ಬೆಳಗಾವಿ ನಗರ ಸಭೆಯು ಅಂಗೀಕರಿಸಿದ ನಿರ್ಣಯದ ಬಗ್ಗೆ ನಿನ್ನೆ ಮಾತನಾಡಿದ್ದೆವು. ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ. ನಿರ್ಣಯವನ್ನು ತರಿಸಿದ್ದಾರೆಯೆ ನೋಡಿದ್ದಾರೆಯೆ ಎನ್ನುವುದನ್ನು ತಿಳಿಸಬೇಕು.

ಉಪಾಧ್ಯಕ್ಷರು.— ಈಗ ಮೊದಲು ಗಮನ ಸೆಳೆಯುವ ಸೂಚನೆ ಬಗ್ಗೆ ತಾವು ಹೇಳಿ, ಅದನ್ನು ಆಮೇಲೆ ನೋಡೋಣ.

ಗಮನ ಸೆಳೆಯುವ ಸೂಚನೆ

ನಂಜನಗೂಡಿನ ಹತ್ತಿರವಿರುವ ಕೊಳವೆ ಬಾವಿಗಳಿಂದ ನೀರಿನ ಮಾಲಿನ್ಯದ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ನಂಜನಗೂಡಿನ ಹತ್ತಿರ ಕೊಳವೆ ಬಾವಿಗಳಿಂದ ರಮ್‌ನಂತಹ ಮದ್ಯಸಾರ ಸೇರಿರುವ ಕಂದುಬಣ್ಣದ ನೀರು ಬರುತ್ತಿದ್ದು, ಇದರಿಂದ ಜನರಿಗೆ, ಪ್ರಾಣಿಗಳಿಗೆ ಮತ್ತು ಬೆಳೆಗಳಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡುತ್ತೇನೆ.

ಮೆ. ಜಿವಿಂನಿ ಡಿಸ್ಟಿಲರಿಯು ನಂಜನಗೂಡಿನ ಬಳಿ ಸ್ಥಾಪನೆಯಾಗಿದ್ದು, ಕಾರ್ಬಿಯನ್ನು ಉಪಯೋಗಿಸಿ, ದಿನಂಪ್ರತಿ ೩೦,೦೦೦ ಲೀಟರ್ ಮದ್ಯಸಾರವನ್ನು ತಯಾರಿಸುವ ಸಾಮರ್ಥ್ಯವನ್ನು ಹೊಂದಿದೆ. ಉದ್ದಿಮೆಯು ದಿನಂಪ್ರತಿ ೪೫೦ ಘನ ಮೀಟರ್ ಕಲುಷಿತ ನೀರನ್ನು ವಿಸರ್ಜಿಸುತ್ತಿದೆ.

ಉದ್ದಿಮೆಯು ತನ್ನ ಕಲುಷಿತ ನೀರನ್ನು ಶುದ್ಧೀಕರಿಸಲು ಮಾಲಿನ್ಯ ನಿಯಂತ್ರಣ ಮಂಡಳಿ ಅಂಗೀಕರಿಸಿದ ಸಂಸ್ಕರಣ ಘಟಕಗಳನ್ನು ನಿರ್ಮಿಸಿದ್ದು, ಶುದ್ಧೀಕರಿಸಲ್ಪಟ್ಟ ನೀರನ್ನು ವ್ಯವಸಾಯಕ್ಕೆ ಉಪಯೋಗಿಸುತ್ತಿದೆ. ಆದರೆ ಶುದ್ಧೀಕರಿಸಲ್ಪಟ್ಟು ವಿಸರ್ಜಿತವಾಗುತ್ತಿರುವ ನೀರು ಮಂಡಲಿ ನಿಗದಿ ಪಡಿಸಿರುವ ಗುಣಮಟ್ಟಕ್ಕೆ ಸರಿಹೊಂದುತ್ತಿಲ್ಲವಾದ್ದರಿಂದ ಈ ಪ್ರದೇಶದಲ್ಲಿ ಅಂತರ್ಜಲ ಮಾಲಿನ್ಯಗೊಂಡಿದೆ. ಆದುದರಿಂದ ಮಂಡಲಿಯು ಈ ಉದ್ದಿಮೆಗೆ ತನ್ನ ಸಮ್ಮತಿ ಪತ್ರವನ್ನು ನಿರಾಕರಿಸಿದೆ.

ಏಪ್ರಿಲ್ ೧೯೮೮ರಲ್ಲಿ ಈ ಉದ್ದಿಮೆಯ ಸಮೀಪದಲ್ಲಿರುವ ಶಾಂಭವಿ ಕೋಳಿ ಸಾಗಾಣಿಕೆ ಕೇಂದ್ರದ ಮಾಲೀಕರು ತಮ್ಮ ಕೊಳವೆ ಬಾವಿಯ ನೀರು ಕಲುಷಿತವಾಗಿದ್ದು ಅವರ ಉದ್ದಿಮೆಗೆ ತೊಂದರೆಯಾಗಿದೆ ಎಂದು ಮಂಡಲಿಗೆ ದೂರು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಆ ಪ್ರದೇಶದ ಕೊಳವೆ ಬಾವಿಗಳ ನೀರನ್ನು ಪರೀಕ್ಷಿಸಲಾಗಿ ಮಲಿನಗೊಂಡಿರುವುದು ದೃಢಪಟ್ಟಿದೆ.

ಅಂತರ್ಜಲದ ಮಾಲಿನ್ಯತೆಯನ್ನು ತಡೆಯಲು ಉದ್ದಿಮೆಗೆ ವಿಥೇನ್ ಅನಿಲ ಉತ್ಪಾದನಾ ತಾಂತ್ರಿಕತೆಯನ್ನು ಅಳವಡಿಸಿ ಮಾಲಿನ್ಯವನ್ನು ಹತೋಟಿಯಲ್ಲಿಡಲು ಆದೇಶ ನೀಡಿದೆ. ಈ ಆದೇಶವನ್ನು ಪಾಲನೆ ಮಾಡದಿರುವುದರಿಂದ ತಾರೀಖು. ೮-೧೧-೮೯ ರಂದು ಮಂಡಲಿಯು ಜಲ (ಮಾಲಿನ್ಯ ಮತ್ತು ನಿಯಂತ್ರಣ)ಕಾಯ್ದೆಯಡಿಯಲ್ಲಿ ನಂಜನಗೂಡಿನ ನ್ಯಾಯಾಲಯದಲ್ಲಿ ಉದ್ದಿಮೆಯ ವಿರುದ್ಧ ಮೊಕದ್ದಮೆ ಹೂಡಿದೆ ಉದ್ದಿಮೆಯು ಉಚ್ಚ ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸಿ ರಿಟ್ ಹಾಕಲಾಗಿ ಉಚ್ಚ ನ್ಯಾಯಾಲಯವು ೧೬-೨-೯೦ ರಂದು ನಂಜನಗೂಡಿನ ನ್ಯಾಯಾಲಯದಲ್ಲಿ ಹೂಡಿದ ಮೊಕದ್ದಮೆಗೆ ತಡೆಯಾಜ್ಞೆ ನೀಡಿ ಉದ್ದಿಮೆಗೆ ಮಂಡಲಿಯು ವಿಧಿಸಿರುವ ಶರತ್ತುಗಳನ್ನು ೧೬-೫-೯೦ ರೊಳಗೆ ಪಾಲಿಸಲು ಆದೇಶಿಸಿದೆ.

೧೮-೫-೯೦ ರಂದು ಮಂಡಲಿಯು ಉದ್ದಿಮೆಯ ಪರಿವೀಕ್ಷಣೆ ಮಾಡಿ ಉಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸದಿರುವುದನ್ನು ಗಮನಿಸಿ ಉದ್ದಿಮೆ ವಿಸರ್ಜಿಸುತ್ತಿರುವ ಕಲುಷಿತ ನೀರಿನ ಮಾದರಿಯನ್ನು ಆ ಪ್ರಾಂತ್ಯದ ಕೊಳವೆ ಬಾವಿಗಳ ನೀರಿನ ಮಾದರಿಗಳನ್ನು ಜಲ ಕಾಯ್ದೆಯ ರೀತ್ಯಾ ವಿಶ್ಲೇಷಣೆಗೆ ಒಳಪಡಿಸಿದೆ. ಆ ವರದಿಯ ಪ್ರಕಾರ ಉದ್ದಿಮೆ ವಿಸರ್ಜಿಸುತ್ತಿರುವ ಕಲುಷಿತ ನೀರು ಮತ್ತು ಕೊಳವೆ ಬಾವಿಗಳ ನೀರು ನಿಗದಿಪಡಿಸಿದ ಗುಣಮಟ್ಟವನ್ನು ಮೀರಿದ್ದು ಈ ಬಾವಿಗಳ ನೀರು ಕೆಡುವುದಕ್ಕೆ ಉದ್ದಿಮೆ ವಿಸರ್ಜಿಸುತ್ತಿರುವ ಕಲುಷಿತ ನೀರೇ ಕಾರಣವೆಂದು ಸಾಬೀತಾಗಿದೆ.

ಈ ಆಧಾರದ ಮೇಲೆ ಮಂಡಲಿಯು ಇಷ್ಟರಲ್ಲೇ ಉಚ್ಚ ನ್ಯಾಯಾಲಯದಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸೂಚಿಸಿದ ಮಾನಕಗಳಿಗೆ ಕಲುಷಿತ ನೀರನ್ನು ಶುದ್ಧೀಕರಿಸಿ ಬಿಡುವವರೆಗೂ ಉದ್ದಿಮೆಯನ್ನು ನಡೆಸದಂತೆ ತಡೆಯಾಜ್ಞೆಯನ್ನು ನೀಡಬೇಕೆಂದು ಕೋರಲಿದೆ, ಉಚ್ಚ ನ್ಯಾಯಾಲಯದ ಆದೇಶದಂತೆ ಮುಂದಿನ ಕ್ರಮ ಜರುಗಿಸಲಾಗುವುದು.

ಶ್ರೀ ವಾಟಾಳ್ ನಾಗರಾಜ್.—ಸನ್ಮಾನ್ಯ ಅಧ್ಯಕ್ಷರೆ, ಇದು ನಿರಂತರವಾಗಿ, ಈ ಕಾರ್ಖಾನೆ ಪ್ರಾರಂಭವಾದಾಗಿನಿಂದಲೂ ನಡೆಯುತ್ತಿದೆ. ಸುಮಾರು ೨೫ ಕಿಲೋ ಮೀಟರ್ ದೂರದಲ್ಲಿರತಕ್ಕಂಥ ಎಲ್ಲಾ ಜಮೀನುಗಳಿಗೂ ಇದರಿಂದ ಹಾನಿ ಮತ್ತು ತೊಂದರೆಯಾಗಿದೆ, ಇದರ ಜೊತೆಗೆ ನಂಜನಗೂಡಿ ನಲ್ಲಿರತಕ್ಕ ನಾಗರೀಕರಿಗೂ ಕುಡಿಯುವ ನೀರಿನ ತೊಂದರೆ ಇದೆ. ಅಲ್ಲಿ ಬಹಳ ಪ್ರಸಿದ್ಧವಾಗಿರತಕ್ಕಂಥ ವಿದ್ಯಾಪೀಠದ ನೀರು ಸಹ ಬಹಳ ಕಲುಷಿತವಾಗಿ ತೊಂದರೆ ಇದೆ. ಪಕ್ಕದಲ್ಲಿದ್ದಂಥ ಕೋಳಿಸಾಗಣಿಕೆ ಕೇಂದ್ರ ಸಂಪೂರ್ಣ ನಾಶವಾಯಿತು. ಅಲ್ಲಿದ್ದಂಥ ದನಕರುಗಳು ನಾಶವಾಗಿವೆ. ಅಲ್ಲಿಗೆ ನಾನು ಪತ್ರಿಕೆಯವರೆಲ್ಲ ಹೋಗಿದ್ದೆವು. ಈ ಕಾರ್ಖಾನೆಯ ಮಾಲೀಕರು ಬಹಳ ಅತ್ಯಂತ ರಾಜಕಾರಣದ ಪ್ರಭಾವ ಇರತಕ್ಕ ಮಾಲೀಕರು ಇದ್ದಾರೆ. ಯಾರು ಏನು ಮಾಡಿದರೂ ಅದನ್ನು ತಡೆಯುತ್ತೇನೆ ಎನ್ನುವಂಥಾದ್ದು ಅವರ ನೀತಿಯಾಗಿದೆ. ನಾನು ಈ ಸಂದರ್ಭದಲ್ಲಿ ಹೇಳುವುದು ಏನೆಂದರೆ ಇದು ಬಹಳ ಪ್ರಮುಖವಾದಂಥ, ಬಹಳ ಗಂಭೀರವಾದಂಥ ಪ್ರಶ್ನೆ. ಆದ್ದರಿಂದ, ಈ ಕಾರ್ಖಾನೆಯ ಲೈಸೆನ್ಸ್ ರದ್ದು ಮಾಡಲೇಬೇಕು. ಆ ಕಾರ್ಖಾನೆಯ ಲೈಸನ್ಸನ್ನು ರದ್ದು ಮಾಡಿದರೆ ಮಾತ್ರ ಇದನ್ನು ತಡೆಯಲಿಕ್ಕೆ ಸಾಧ್ಯ. ನಾವು ಇನ್ನು ಮುಂದೆ ಅನುಕೂಲ ಮಾಡುತ್ತೇವೆ, ಕಲುಷಿತ ವಾತಾವರಣ ತಪ್ಪಿಸುತ್ತೇವೆ ಎಂದು ಏನೇ ಸರ್ಕಾರಕ್ಕೆ ಬರೆದು ಕೊಟ್ಟರೂ ಆದರಿಂದ ನಂಬಿಕೆ ಬರತಕ್ಕಂಥ ಪ್ರಶ್ನೆ ಇಲ್ಲ. ಆದ್ದರಿಂದ ದಯವಾಡಿ ಆ ಡಿಸ್ಟಿಲರಿಯನ್ನು ಮುಚ್ಚತಕ್ಕದ್ದು ಒಂದೇ ಈಗ ಉಳಿದಿರತಕ್ಕ ಮಾರ್ಗ. ಆದ್ದರಿಂದ, ಈ ಬಗ್ಗೆ ತಾವು ಯಾವುದೇ ಒಂದು ಒತ್ತಡಕ್ಕೂ, ಪ್ರಭಾವಕ್ಕೂ ಮಣಿಯಬಾರದು. ಆ ಕಾರ್ಖಾನೆಯಿಂದ ಬರತಕ್ಕ ವಾಸನೆ ಕೂಡ ಅಷ್ಟೇ ಕೆಟ್ಟಿರುತ್ತದೆ. ತಾವು ನಂಜನಗೂಡು, ಚಾಮರಾಜನಗರದ ಕಡೆಗೆ ಹೋದಾಗ ಆದರ ವಾಸನೆ ನೋಡಿದರೆ ತಮಗೆ ಗೊತ್ತಾಗುತ್ತದೆ. ಅವರ ಸುತ್ತಮುತ್ತ ಇರತಕ್ಕ ಸುಮಾರು ೧೦೦-೧೨೦ ಹಳ್ಳಿಗಳಿಗೆ ೫ ಗಂಟೆಯ ಮೇಲೆ ಕೆಟ್ಟವಾಸನೆ ಬರುವುದಕ್ಕೆ ಪ್ರಾರಂಭ ವಾಗುತ್ತದೆ. ಆ ಕೆಟ್ಟ ವಾಸನೆಯಿಂದ ಗಾಳಿಯೂ ಕಲುಷಿತವಾಗಿ ನಾಳೆ ಇದು ವಿಷವಾಗಿ ಪರಿವರ್ತನೆಯಾಗಿ ಸಾವಿರ ರಾ ಜನರ ಪ್ರಾಣಕ್ಕೂ ಹಾನಿ ಒದಗುತ್ತದೆ. ಆದ್ದರಿಂದ, ದಯವಾಡಿ ಸರ್ಕಾರ ಈ ಕಾರ್ಖಾನೆಯನ್ನು ಮುಚ್ಚಿಸುವಂಥ ತೀರ್ಮಾನಕ್ಕೆ ಬರಬೇಕು. ಅಧ್ಯಕ್ಷರೆ, ನನಗೆ ತಾವು ಅವಕಾಶ ಕೊಟ್ಟರೆ, ನಾನು ಅಲ್ಲಿಂದ ತಂದಿರತಕ್ಕ ನೀರಿನ ಸ್ಯಾಂಪಲ್‌ನ್ನು ತಮ್ಮ ಕಡೆ ಕಳುಹಿಸಿಕೊಡುತ್ತೇನೆ. ತಾವು ಅದನ್ನು ಪರಿಶೀಲನೆ ಮಾಡಬಹುದು. ನಾನು ಅಲ್ಲಿಗೆ ಹೋಗಿ ವೈಯಕ್ತಿಕವಾಗಿ ನೋಡಿಕೊಂಡು ಬಂದಿದ್ದೇನೆ. ಅಧ್ಯಕ್ಷರೆ, ಇದು ಸುಮಾರು ೨೫೦ ಅಡಿ ಆಳದ ಬಾವಿಯಿಂದ ಬರತಕ್ಕ ನೀರು ಇದನ್ನು ತಾವು ನೋಡಬಹುದು.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಒಂದು ದೊಡ್ಡ ಬಾಟಲ್‌ನಲ್ಲಿ ತಂದಿದ್ದಂಥ ನೀರನ್ನು ಸಭೆಯಲ್ಲಿ ಪ್ರದರ್ಶಿಸಿದರು.)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಸದನದ ಪದ್ಧತಿ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ. ಸದನದಲ್ಲಿ ಚರ್ಚೆ ಮಾಡಲಿ. ಆದರೆ ಅವರು ಒಂದು ಬಾಟಲ್‌ನಲ್ಲಿ ತೆಗೆದುಕೊಂಡು ಬಂದು ಸಭೆಯಲ್ಲಿ ಪ್ರದರ್ಶಿಸುವುದು. ಮಾಡಿದರೆ ನಾಳೆ ಮತ್ತೊಬ್ಬರು ಗಡಿಗೆ ಹೊತ್ತುಕೊಂಡು ಬಂದು ತೋರಿಸುವಂಥಾದ್ದನ್ನು ಮಾಡುತ್ತಾರೆ. ಇದೆಲ್ಲಾ ಸರಿ ಎಂದು ತಮಗೆ ಅನಿಸಿದರೆ ಅವಕಾಶ ಕೊಡಿ, ಇಂಥಾದ್ದನ್ನು ಸಭೆಯಲ್ಲಿ ತರುವುದು ತಪ್ಪಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ನಾನು ಅಲ್ಲಿಂದ ತಂದಿರತಕ್ಕ ನೀರನ್ನು ತೋರಿಸಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಈ ಸದನ ಎಕ್ಸಿಬಿಷನ್ ಸೆಂಟರ್ ಏನು ಈ ರೀತಿ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ ನಾಳೆ ಇನ್ನೊಬ್ಬರು ಇನ್ನೊಂದು ತೆಗೆದುಕೊಂಡು ಬರುತ್ತಾರೆ. ಮಾನ್ಯ ಸದಸ್ಯರಲ್ಲಿ ಬಹಳ ಸೀನಿಯರ್ ಮೆಂಬರ್ ಇದ್ದಾರೆ. ಅವರು ಹೀಗೆ ನಡೆದುಕೊಂಡರೆ ಹೇಗೆ.

ಉಪಾಧ್ಯಕ್ಷರು.—ವಾಟಾಳ್ ನಾಗರಾಜ್‌ರವರೆ, ನೀವು ಇದನ್ನು ತರುವುದಕ್ಕೆ ಮುಂಚೆ ಕೇಳಿ ತರಬೇಕಾಗಿತ್ತು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಜನರು ಅಲ್ಲಿ ವಿಷದ ನೀರನ್ನು ಕುಡಿಯುತ್ತಿದ್ದಾರೆ. ಆದ್ದರಿಂದ, ಹೇಳಬೇಕಾಗಿದೆ, ಮತ್ತು ಆ ನೀರನ್ನು ತೋರಿಸಬೇಕಾಗಿದೆ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಅಧ್ಯಕ್ಷರೆ, ಈ ವಿಷಯವನ್ನು ಮಾನ್ಯ ಸದಸ್ಯರು ಬಹಳ ದಿವಸಗಳಿಂದಲೂ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳಿಗೆ ಕನ್‌ವಿನ್ಸ್ ಮಾಡಲಿಕ್ಕೆ, ಕಲ್ಲು ಬೇಕಾದರೂ ತರಬಹುದು, ಬಾಟಲ್ ಬೇಕಾದರೂ ತರಬಹುದು, ಗಡಿಗೆ ಬೇಕಾದರೆ ಗಡಿಗೆ ತರೋಣ. ಇದೇ ಕೆಲಸ ಮಾಡೋಣ.

(ಗೊಂದಲ)

ಉಪಾಧ್ಯಕ್ಷರು.—ಈಗ ಅವರು ತಂದಾಗಿದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಒಬ್ಬ ಮಾನ್ಯ ಸದಸ್ಯರು.—ಉಪಾಧ್ಯಕ್ಷರೆ, ಮೊದಲು ಆ ಬಾಟಲನ್ನು ಆಚೆ ಇಡಿಸಿ.

ಶ್ರೀ ವಾಟಾಳ್ ನಾಗರಾಜ್.—ಬಹುಶಃ ಶಾಸಕರುಗಳು ಆ ಕಡೆ ಹೋದಾಗ ಈ ನೀರನ್ನು ಕುಡಿದರೆ ಸತ್ತು ಹೋಗುತ್ತಾರೆ. ಆದ್ದರಿಂದ ಅದನ್ನು ತೋರಿಸುವುದಕ್ಕೆ ತಂದಿದ್ದೇನೆ, ಆ ಪರಿಸ್ಥಿತಿ ಇದೆ.

ಶ್ರೀ ಎಂ. ಪಿ. ವೆಂಕಟೇಶ್.—ದನಗಳೆಲ್ಲಾ ಸತ್ತು ಹೋಗಿವೆ.

ಶ್ರೀ ಬಿ. ಸ್ವಾಮಿರಾವ್.—ತಾವು ಇದಕ್ಕೆ ಪರವಾನಗಿ ಕೊಡಬೇಕು. ಇಲ್ಲದೇ ಹೋದರೆ ಈ ಸಭೆಯ ನಿಯಮಾವಳಿಗೆ ವಿರುದ್ಧವಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಉಪಾಧ್ಯಕ್ಷರೆ ತಾವು ಇದನ್ನು ಹೊರಕ್ಕೆ ಕಳಿಸ ಬೇಕೆಂದರೆ ನಾನು ಕಳಿಸಿ ಕೊಡುತ್ತೇನೆ.

ಶ್ರೀ ಎಂ. ಮಹದೇವ್.—ಮಾನ್ಯ ಉಪಾಧ್ಯಕ್ಷಣಿಯಂವರೆ ಜೆಮಿನಿ ಡಿಸ್ಟಿಲರಿ ಇರುವುದು ನಂಜನಗೂಡು ಕ್ಷೇತ್ರದಲ್ಲಿ ನನ್ನ ಸ್ವಕ್ಷೇತ್ರದಲ್ಲಿ ಈ ಡಿಸ್ಟಿಲರಿ ಅಲ್ಲಿ ಬಂದ ಮೇಲೆ ನಂಜನಗೂಡು ಎನ್ನುವ ಹೆಸರನ್ನು ಬದಲಾಯಿಸಿ ವಿಷಕಂಠನಗೂಡು ಎಂಬ ಹೆಸರನ್ನು ಇಡುವಂತಹ ಪರಿಸ್ಥಿತಿ ಬಂದಿದೆ. ಏಕೆಂದರೆ ಇದು ಬಹಳ ಗಹನವಾದಂಥ ವಿಚಾರ. ನನ್ನ ಕ್ಷೇತ್ರದಲ್ಲಿರತಕ್ಕಂತಹ ನಾಗರೀಕರು ಬಹಳ ಕಷ್ಟಪಡುತ್ತಿದ್ದಾರೆ. ನಂಜನಗೂಡಿನ ಸುತ್ತಮುತ್ತ ಇರುವ ತಾಲ್ಲೂಕಿನಲ್ಲಿ ಜಲಮಾಲಿನ್ಯ, ವಾಯು ಮಾಲಿನ್ಯ ಆಗಿದೆ ಮತ್ತು ನೆಲ ಮಾಲಿನ್ಯ ಕೂಡ ಆಗಿದೆ. ನಾಗರೀಕರಂತೂ ಬಹಳ ಅನಾರೋಗ್ಯದಿಂದ ಬಳಲುತ್ತಿವೆ. ಅದಲ್ಲದೆ ನಂಜನಗೂಡಿನ ಸುತ್ತಮುತ್ತ ಜೆಮಿನಿ ಡಿಸ್ಟಿಲರಿ ಒಂದೆ ಅಲ್ಲ ಡನ್‌ಪೌಡರ್ಡ್ ಫ್ಯಾಕ್ಟರಿ ಮತ್ತಿತರ ಫ್ಯಾಕ್ಟರಿಗಳಿವೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಗೆ ಬಾವಿಯಲ್ಲಿ ಕಪ್ಪು ನೀರು ಬರುತ್ತಿದೆ ಎಂದು ಹೇಳುತ್ತಿದ್ದಾರೊ ಹಾಗೆ ಡನ್‌ಪೌಡರ್ ಫ್ಯಾಕ್ಟರಿ ಸುತ್ತ ಮುತ್ತ ಬಾವಿ ತೆಗೆದರೆ ಕಪ್ಪು ನೀರು ಬರುತ್ತಿದೆ. ನಾನು ಬಹಳ ಸೀರಿಯಸ್ಸಾಗಿ ಹೇಳುತ್ತಿದ್ದೇನೆ. ನಾನು ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ. ನಾನು ಆ ಕ್ಷೇತ್ರಕ್ಕೆ ಪ್ರವಾಸ ಹೋದಾಗ ನೋಡಿದ್ದೇನೆ ಅಲ್ಲಿನ ಸುತ್ತ ಮುತ್ತಲಿನ ಜನಗಳ ಪರಿಸ್ಥಿತಿ ಯಾವ ರೀತಿ ಇದೆಯೆಂದರೆ ರಾತ್ರಿ ಹೊತ್ತು ದುಡಿದು ಬಂದಂಥ ರೈತರು ಈ ವಾಸನೆಯನ್ನು ಕುಡಿದರೆ ಉಸಿರು ಕಟ್ಟಿದ ಹಾಗೆ ಆಗುತ್ತದೆ. ಇದರಿಂದ ಅಸ್ತಮಾ ಬರುತ್ತಿದೆ, ಚರ್ಮ ರೋಗ ಬರುತ್ತಿದೆ. ಮತ್ತು ಹೊಟ್ಟೆ ನೋವು ಬರುತ್ತಿದೆ. ಇದು ನಾಗರೀಕರ ಭವಿಷ್ಯದ ಪ್ರಶ್ನೆ, ಆರೋಗ್ಯದ ಪ್ರಶ್ನೆ ಜೀವಂತ ಪ್ರಶ್ನೆಯಾಗಿದೆ. ಆದ್ದರಿಂದ ಈ ವಿಷಯಕ್ಕೆ ಹೆಚ್ಚಿಗೆ ಆದ್ಯತೆ ಕೊಡಲೆ ಬೇಕಾಗುತ್ತದೆ ಮತ್ತು ಕಾಲಾವಕಾಶವನ್ನು ಕೂಡ ಹೆಚ್ಚಿಗೆ ಕೊಡಬೇಕಾಗುತ್ತದೆ. ಜನ ಅಲ್ಲಿ ಸುತ್ತಮುತ್ತ ಇರತಕ್ಕಂತಹ ಕಾರ್ಖಾನೆಗಳಿಂದ ಕಲ್ಮಶ ನೀರು, ಕಲ್ಮಶ ಗಾಳಿಯಿಂದ ಸುತ್ತುವರೆದಿದ್ದಾರೆ.

ಜನ ಬಹಳ ಕಷ್ಟ ಪಡುತ್ತಿದ್ದಾರೆ. ಅಲ್ಲಿನ ನಾಗರೀಕರ ಭವಿಷ್ಯವಂತೂ ಹೇಳಲಸದಳವಾಗಿದೆ. ಜೆಮಿನಿ ಡಿಸ್ಟಿಲರಿಗೆ ೨ ಕೋಟಿ ರೂಪಾಯಿ ಬಂಡವಾಳವನ್ನು ಹಾಕಿಸ್ಥಾಪನೆಯಾಗಿದ್ದು ಬಹುಶಃ ಆ ಬಂಡವಾಳದ ಹತ್ತರಷ್ಟು ಈಗ ಬಂದಿದೆ. ಅಲ್ಲಿ ೨ ಕೋಟಿ ರೂಪಾಯಿಗಳ ಬಂಡವಾಳ ಹಾಕಿ ಕಾರ್ಖಾನೆಯೊಂದನ್ನು ಸ್ಥಾಪನೆ ಮಾಡಿ ಇವತ್ತಿನ ದಿವಸ ೧೫–೨೦ ಕೋಟಿ ರೂಪಾಯಿಗಳನ್ನು ಸಂಪಾದನೆ ಮಾಡಿದ್ದಾರೆ. ಆದ್ದರಿಂದ ಆ ಕಾರ್ಖಾನೆಯನ್ನು ಮುಚ್ಚಿದರೂ ಅವರಿಗೇನೂ ನಷ್ಟವಾಗುವುದಿಲ್ಲ. ದಯವಿಟ್ಟು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಏನೇ ಕಾರಣ ಇರಲಿ, ಏನೇ ಒತ್ತಡ ಇರಲಿ ಆ ಕಾರ್ಖಾನೆಯ ಲೈಸೆನ್ಸನ್ನು ಮೊದಲು ಕ್ಯಾನ್ಸಲ್‌ಮಾಡಿ ಅದನ್ನು ಸ್ಥಳಾಂತರ ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ಅಲ್ಲಿ ಡನ್‌ಪೋರ್ಡ್ ಕಾರ್ಖಾನೆಯಿಂದಲೂ ಕಲ್ಮಶದಿಂದ ಕೂಡಿದ ನೀರು ಬರುತ್ತಿದೆ. ಅಲ್ಲಿನ ಬಾವಿಗಳಲ್ಲೂ ಸಹ ಇದೇ ರೀತಿ ಕಪ್ಪು ನೀರು ಕಾಣಿಸಿಕೊಳ್ಳುತ್ತಿದೆ. ಅಲ್ಲಿ ಈ ಕಲ್ಮಶವಾದಂಥ ನೀರನ್ನು ಏಕೆ ನಿಯಂತ್ರಣ ಮಾಡುವುದಕ್ಕೆ ಆಗುತ್ತಿಲ್ಲವೆಂದರೆ ಅವರು ಜಲ, ವಾಯುಮಾಲಿನ್ಯ ಮಂಡಳಿಯ ಆದೇಶವನ್ನು ಸಾಕಷ್ಟು ಪಾಲಿಸುತ್ತಿಲ್ಲ, ಅದನ್ನು ಅವರು ಪಾಲಿಸಿದ್ದರೆ ನಿಯಂತ್ರಣ ಮಾಡಬಹುದಿತ್ತು. ಅವರು ಕೆಳಗಡೆ ಸಿಮೆಂಟ್‌ಕಾಂಕ್ರೀಟ್ ಹಾಕಿ ಕಲ್ಮಶದಿಂದ ಕೂಡಿದ ನೀರು ಒಳಗಡೆ ಹೋಗದಂತೆ ಮಾಡಬೇಕಾಗಿತ್ತು. ಅದನ್ನು ಮಾಡುವುದಕ್ಕೆ ಅವರು ಇಷ್ಟಪಡುತ್ತಿಲ್ಲ. ಅಲ್ಲಿ ಸುಮಾರು ೨೦೦ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅವರ ಪರಿಸ್ಥಿತಿ ಏನಾಗಿದೆ ಎಂದರೆ, ಕಾರ್ಖಾನೆಯಿಂದ ಬಂದ ಕೂಡಲೇ ಅವರಿಗೆ ಚರ್ಮರೋಗ ಮತ್ತು ಕರುಳುಬೇನೆ ಇವೆಲ್ಲ ಪ್ರಾರಂಭವಾಗಿದೆ.

ಉಪಾಧ್ಯಕ್ಷಣಿಯವರು.—ಇದು ಗಮನ ಸೆಳೆಯುವ ಸೂಚನೆ. ತಾವು ಭಾಷಣ ಮಾಡುವ ಹಾಗಿಲ್ಲ. ಪ್ರಶ್ನೆ ಕೇಳಿದರೆ ಮಂತ್ರಿಗಳು ಉತ್ತರಿಸುತ್ತಾರೆ.

ಶ್ರೀ ಎಂ. ಮಹದೇವ್.—ನಾನು ಅವಶ್ಯಕವಾದ ವಿಷಯವನ್ನು ತಮ್ಮ ಮುಂದೆ ತರುತ್ತಿದ್ದೇನೆಯೇ ಹೊರತು ನಾನು ಭಾಷಣ ಮಾಡುವುದಕ್ಕೆ ಇಚ್ಛಿಪಡುವುದಿಲ್ಲ. ಭಾಷಣ ಮಾಡುವುದಕ್ಕೆ ಡಿಮ್ಯಾಂಡ್‌ಗಳಿವೆ, ಆಗ ನಾನು ಭಾಷಣ ಮಾಡುತ್ತೇನೆ, ನನ್ನ ಸ್ವಕ್ಷೇತ್ರದಲ್ಲಿ ನಾಗರೀಕರು ನನ್ನ ಎದುರಿಗೆ ಕಷ್ಟಪಡುತ್ತಿದ್ದಾರೆ, ಆರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ಇದಕ್ಕೆ ಒಂದೇ ಪರಿಹಾರ ಕಾರ್ಖಾನೆಯ ಲೈಸೆನ್ಸನ್ನು ರದ್ದು ಮಾಡಬೇಕು ಮತ್ತು ಅದನ್ನು ಸ್ಥಳಾಂತರ ಮಾಡಬೇಕು. ನಂಜನಗೂಡಿನಲ್ಲಿ ಜೆಮಿನಿ ಡಿಸ್ಟಿಲರಿ ಫ್ಯಾಕ್ಟರಿ ಇರಕೂಡದು ಅದು ಎಲ್ಲಾದರೂ ಹೋಗಲಿ ಅವರು ಸಾಕಷ್ಟು ಸಂಪಾದನೆ ಮಾಡಿಕೊಂಡಿದ್ದಾರೆ. ಮತ್ತು ಇದೇ ರೀತಿ ಬೇರೆ ಕಾರ್ಖಾನೆಗಳಿಂದ ಬರತಕ್ಕ ನೀರನ್ನು ತಪ್ಪಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಇದು ಜನಜೀವನದ ಮೇಲೆ ಪರಿಣಾಮವಾಗುತ್ತದೆ ಈ ವಿಷಯದಲ್ಲಿ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತರುವುದು ಸರ್ಕಾರದ ವಿಳಂಬ ನೀತಿ ಆಗುತ್ತದೆ. ಇದು ಮಾನವೀಯ ಸಮಸ್ಯೆಯಾಗಿರುವುದರಿಂದ ಸರ್ಕಾರ ಆದಷ್ಟು ಬೇಗ ಜನರನ್ನು ಸಂಕಷ್ಟದಿಂದ ಪಾರು ಮಾಡುವ ಸಲುವಾಗಿ ತೀವ್ರವಾಗಿ ಕ್ರಮ ತೆಗೆದುಕೊಂಡು ಆ ಕಾರ್ಖಾನೆಯ ಲೈಸೆನ್ಸನ್ನು ರದ್ದು ಮಾಡಬೇಕು. ನ್ಯಾಯಾಲಯಕ್ಕೆ ಹೋದರೆ ತಡವಾಗಿ ಜನರಿಗೆ ಒಳಿತಾಗಲಿಯಾಗುತ್ತದೆ. ದಯವಿಟ್ಟು ತಾವಾದ ಮುಖ್ಯಮಂತ್ರಿಗಳು ಆ ಫ್ಯಾಕ್ಟರಿಯ ಲೈಸೆನ್ಸನ್ನು ರದ್ದು ಪಡಿಸಬೇಕು, ಜನರ ಜೀವವನ್ನು ಉಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಧ್ಯಕ್ಷಣಿಯವರೆ, ಈ ಪ್ರಶ್ನೆಗೆ ನಾನು ಕೊಡಬೇಕಾದಂತಹ ವಿವರಗಳನ್ನು ಕೊಟ್ಟಿದ್ದೇನೆ. ವಿವಾದಕ್ಕೆ ಆಸ್ಪದವೇ ಇಲ್ಲ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರಾಗಲಿ, ಮಹಾದೇವ್‌ರವರಾಗಲಿ ಅವರು ಹೇಳಿದ ಮಾತನ್ನು ನಾನು ಸ್ಟೇಟ್‌ಮೆಂಟ್‌ನಲ್ಲಿ ಒಪ್ಪಿಕೊಂಡಿದ್ದೇನೆ. ಈ ಡಿಸ್ಟಿಲರಿಯಿಂದ ಸುತ್ತ ಮುತ್ತ ಇರುವ ಬಾವಿಗಳ ನೀರು ಮಾಲಿನ್ಯವಾಗುತ್ತಿದೆ. ಅದಕ್ಕಾಗಿ ನಮ್ಮ ಸ್ಟೇಟ್ ಪೊಲ್ಯೂಷನ್ ಕಂಟ್ರೋಲ್ ಬೋರ್ಡಿನವರು ಹಿಂದೆ ೧೯೯೯ ರಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ ಮತ್ತು ಪೊಲ್ಯೂಷನ್ ಕಂಟ್ರೋಲ್ ಆಕ್ಟ್ ಪ್ರಕಾರ ಅವರಿಗೆ ಏನು ಅಧಿಕಾರ ಇತ್ತು ಆ ಅಧಿಕಾರವನ್ನು ಅವರು ಚಲಾಯಿಸಿ ಕೋರ್ಟಿನಲ್ಲಿ ಕೇಸ್ ಹಾಕಿದ್ದಾರೆ ಆದರೆ ಈ ಮಧ್ಯದಲ್ಲಿ ಕಾರ್ಖಾನೆಯ ಮಾಲೀಕರು ಹೈಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ. ಹೈಕೋರ್ಟಿನವರು, ಅವರಿಗೆ ೩ ತಿಂಗಳಲ್ಲಿ ಪೊಲ್ಯೂಷನ್ ಕಂಟ್ರೋಲ್ ಮಾಡುವುದಕ್ಕೆ ಪೊಲ್ಯೂಷನ್ ಕಂಟ್ರೋಲ್ ಬೋರ್ಡಿನವರು ಏನು ಸೂಚನೆಗಳನ್ನು ಕೊಟ್ಟಿದ್ದಾರೆ ಅದನ್ನು ಪಾಲಿಸಬೇಕು ಎಂದೂ ಹೇಳಿದಾರೆ. ಅದಾದ ಮೇಲೆ ಆ ಒಂದು ನಿಗದಿ ಮಾಡಿದ ದಿವಸಗಳು ಮುಗಿದ ಮೇಲೆ ತಕ್ಷಣವೇ ನಮ್ಮ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್‌ನ ಅಧಿಕಾರಿಗಳು ಹೋಗಿ ಮತ್ತೆ ನೋಡಿ

ಕೊಂಡು ಬಂದಿದ್ದಾರೆ. ಅವರು ಏನೂ ಮಾಡಿಲ್ಲ. ಪಾಟೀಳ್ ನಾಗರಾಜ್ ಅವರು ಹೇಳಿದ್ದನ್ನು ಒಪ್ಪಿ ಕೊಳ್ಳುತ್ತೇನೆ. ಹೈಕೋರ್ಟಿನಿಂದ ತಡೆಯಾಜ್ಞೆ ತೆಗೆದುಕೊಂಡು ೩ ತಿಂಗಳಲ್ಲಿ ಸರಿ ಮಾಡುತ್ತೇವೆಂದು ಹೇಳಿದವರು ಏನೂ ಮಾಡಿಲ್ಲ. ಅದರ ಅರ್ಥ ಇನ್ನೂ ಸುತ್ತ ಮುತ್ತಲಿನ ಬಾವಿಗಳ ನೀರು ಮಾಲಿನ್ಯವಾಗುತ್ತಿದೆ. ಬಹುಶಃ ಅವರು ತೋರಿಸಿದಂತಹ ನೀರು ಕೂಡ ಅದೇ ಬಾವಿಯದು ಇದ್ದರೂ ಇರಬಹುದು, ಇಲ್ಲವೆಂದು ಹೇಳುವುದಿಲ್ಲ.

ಅದನ್ನು ನಾನು ಇಷ್ಟಕ್ಕೆ ತಕರಾರು ಮಾಡುತ್ತಾ ಇಲ್ಲ ವಿವಾದಕ್ಕೆ ಆಸ್ಪದವಿಲ್ಲ, ನಾನು ಒಪ್ಪಿ ಕೊಳ್ಳುತ್ತಿದ್ದೇನೆ ಪ್ರಶ್ನೆ ಏನಾಗಿದೆ ಅಂದರೆ ಹೈಕೋರ್ಟಿನಿಂದ ತಡೆಯಾಜ್ಞೆ ಇದೆ. ಮೂರು ತಿಂಗಳೊಳಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಕಾರ್ಖಾನೆಯವರು ಹೈಕೋರ್ಟಿಗೆ ಏನು ಭರವಸೆ ಕೊಟ್ಟಿದ್ದರು ಆ ಭರವಸೆಯನ್ನು ಅವರು ಈಡೇರಿಸಿಲ್ಲವೆಂದು ಹೈಕೋರ್ಟ್ ಮುಂದೆ ನಾವು ಹೋಗಿ ಸಿದ್ಧಪಡಿಸಬೇಕು. ಅದಕ್ಕೆ ಅಫಿಡವಿಟ್ ಕೊಡಬೇಕೆಂಬ ಮಾತನ್ನು ಪೊಲ್ಯೂಷನ್ ಕಂಟ್ರೋಲ್ ಬೋರ್ಡ್‌ನವರಿಗೆ ನಾನು ಇವತ್ತು ಹೇಳಿದ್ದೇನೆ. ಅವರು ರಿಪೋರ್ಟ್ ತರಿಸಬೇಕು. ಎರಡು ರಿಪೋರ್ಟ್ ಬೇಕಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು, ಪಲ್ಯೂಷನ್ ಬೋರ್ಡ್‌ನಲ್ಲೇ ಒಂದು ಲ್ಯಾಬೊರೇಟರಿ ಇದೆ. ಅವರು ಕೂಡ ಸುತ್ತಮುತ್ತಲ ಬಾವಿಗಳಲ್ಲಿ ಯಾವರೀತಿ ನೀರು ಮಾಲಿನ್ಯವಾಗುತ್ತಿದೆ ಎಂಬುದನ್ನು ಪರೀಕ್ಷೆ ಮಾಡಬೇಕು ಇನ್ನೊಂದು ಗೌರ್ನಮೆಂಟ್ ಲ್ಯಾಬೊರೇಟರಿ ಇದೆ. ಅವರೂ ಪರೀಕ್ಷೆ ಮಾಡಿ ರಿಪೋರ್ಟ್ ಕೊಡಬೇಕು. ಈ ಎರಡೂ ರಿಪೋರ್ಟ್ ತರಿಸಿ ಹೈಕೋರ್ಟ್‌ನಲ್ಲಿ ಅಫಿಡವಿಟ್ ಹಾಕಿ ನೋಡಿ ಈ ರೀತಿ ಆಗುತ್ತಿದೆ, ಅದಕ್ಕಾಗಿ ಈ ಒಂದು ಡಿಸ್ಟಿಲರಿ ನಡೆಸದಹಾಗೆ ನೀವು ಆಜ್ಞೆ ಹೊರಡಿಸಬೇಕು ಎಂದು ಅವರು ಕೇಳುವವರಿದ್ದಾರೆ. ಅದು ಒಂದು ವಿಚಾರ ಬಹುಶಃ ಹೈಕೋರ್ಟಿನಿಂದ ಆ ರೀತಿ ನಿರ್ಣಯ ಬಂದರೆ ಅವರು ಫ್ಯಾಕ್ಟರಿ ಮುಚ್ಚಬೇಕಾಗುತ್ತದೆ. ಫ್ಯಾಕ್ಟರಿಯನ್ನು ಮುಚ್ಚಿಸುವಂಥ ಅಧಿಕಾರ ಪಲ್ಯೂಷನ್ ಬೋರ್ಡಿನ ಅಧಿಕಾರಿಗಳಿಗೆ ಇಲ್ಲ. ಲೈಸೆನ್ಸ್ ವಿತಕ್ಕೆ ಕ್ಯಾನ್ಸಲ್ ಮಾಡುವುದಿಲ್ಲ ಎಂದು ಮಾನ್ಯ ಸದಸ್ಯರು ಕೇಳಿದರು. ಇದೇ ಪ್ರಶ್ನೆ ಹೈಕೋರ್ಟ್ ಮುಂದೆ ಇರುವುದರಿಂದ ನಾವೇನಾದರೂ ಲೈಸೆನ್ಸ್ ಕ್ಯಾನ್ಸಲ್ ಮಾಡಿದರೆ ಹೈಕೋರ್ಟ್‌ನಿಂದ ಮತ್ತೊಂದು ತಡೆಯಾಜ್ಞೆ ಬರುತ್ತದೆ. ಆದ್ದರಿಂದ ಇದನ್ನು ಪರಿಶೀಲನೆ ಮಾಡಿಸಂತಿದ್ದೇನೆ. ಹೈಕೋರ್ಟ್ ಮುಂದೆ ಈ ಪ್ರಶ್ನೆ ಇದ್ದಾಗ ನಾವು ಅಫಿಡವಿಟ್ ಮುಂತಾದ್ದು ಹಾಕಿ ನೋಡಿ ನೀವು ಮೂರು ತಿಂಗಳು ಅವಕಾಶ ಕೊಟ್ಟರೂ ಕ್ರಮ ಕೈಗೊಂಡಿಲ್ಲ. ಸುತ್ತಮುತ್ತಲಿನ ಜನರ ಆರೋಗ್ಯದ ಮೇಲೆ ಬಹಳ ಕೆಟ್ಟ ಪರಿಣಾಮವಾಗುತ್ತಿದೆ ಎಂದು ನಾವು ಹೈಕೋರ್ಟ್‌ನವರಿಗೆ ತಿಳಿಸಿ ಹೈಕೋರ್ಟಿನಿಂದ ಈ ಕಾರ್ಖಾನೆ ಮುಂದುವರೆಯಂದಂತೆ ಆಜ್ಞೆ ಹೊರಡಿಸುವುದಕ್ಕೆ ಪ್ರಯತ್ನ ಮಾಡಂತ್ತೇವೆ. ಇದು ಒಂದು ಈ ಪ್ರಯತ್ನದ ಜೊತೆಯಲ್ಲಿ ನಮ್ಮ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್‌ನಿಂದಲೂ ಕೂಡ ವರದಿ ತರಿಸಿಕೊಂಡು ಸರ್ಕಾರದ ಮಟ್ಟದಲ್ಲಿ ಲೈಸೆನ್ಸ್ ಕ್ಯಾನ್ಸಲ್ ಮಾಡಲಿಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ ಆದರೆ ಒಂದು ವಿಚಾರ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಇದೊಂದೇ ಡಿಸ್ಟಿಲರಿಯಲ್ಲಿ ಈ ಪರಿಸ್ಥಿತಿ ಇದೆಯೆಂದು ಅಲ್ಲ ಬಹುಶಃ ಅನೇಕ ಡಿಸ್ಟಿಲರಿಗಳಲ್ಲಿ ಇದೇ ಪರಿಸ್ಥಿತಿ ಇದೆ. ಅವರು ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಮಾಡುವುದಿಲ್ಲ. ಮಾಡಿದರೂ ಅರ್ಧಂಬರ್ಧ ಮಾಡುತ್ತಾರೆ. ಇದರಿಂದ ಅವರಿಗೂ ಲಾಭ ಇಲ್ಲ, ಸುತ್ತಮುತ್ತಲ ಜನರಿಗೂ ಲಾಭ ಇಲ್ಲ ಸರಿಯಾಗಿ ಪರ್‌ಫೆಕ್ಟಾಗಿ ಮಾಡಬೇಕೆಂದರೆ ಬಹಳ ದುಡ್ಡು ಖರ್ಚಾಗುತ್ತದೆ, ಅಷ್ಟು ದುಡ್ಡು ಖರ್ಚು ಮಾಡಿದರೆ ಈ ಫ್ಯಾಕ್ಟರಿ ನಡೆಸುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಇದನ್ನು ಪೂರ್ತಿಯಾಗಿ ವಿಚಾರ ಮಾಡಿ ಒಂದು ಕ್ರಮ ಕೈಗೊಳ್ಳಬೇಕಾಗಿದೆ ಈ ವಿಚಾರದಲ್ಲಿ ಹೈಕೋರ್ಟಿನಲ್ಲಿ ಹೋಗಿ ನಾವು ಪ್ರಯತ್ನ ಮಾಡುತ್ತೇವೆ. ಬಹುಶಃ: ಹೈಕೋರ್ಟಿನಲ್ಲಿ ನಮಗೆ ಯಶಸ್ಸು ಸಿಗಬಹುದೆಂದು ಭಾವನೆ ಮಾಡಿದ್ದೇವೆ. ಒಂದುವೇಳೆ ಅಲ್ಲಿ ಸಿಗದೇ ಹೋದರೆ ಎರಡನೇ ಹಾದಿಯಿಂದ ಈ ಪಲ್ಯೂಷನ್ ನಾವ ರೀತಿ ಕಂಟ್ರೋಲ್ ಮಾಡಲಿಕ್ಕೆ ಸಾಧ್ಯವೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ii) ಸೇಂದಿ ಮಾರಾಟ ನಿರ್ಬಂಧವ ಕುರಿತಾದ ಸರ್ಕಾರದ ಘೋಷಣೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರ್ತೆದಾರರಿಗೆ ಉಂಟಾಗಿರುವ ತೊಂದರೆ.

ಶ್ರೀ ಬಸವರಾಜ್ (ಬ್ರಹ್ಮಾವರ) —ಮಾನ್ಯ ಅಧ್ಯಕ್ಷರೆ, ಸೇಂದಿ ಮಾರಾಟ ನಿರ್ಬಂಧವ ಕುರಿತಾದ ಸರ್ಕಾರದ ಘೋಷಣೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರ್ತೆದಾರರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಗಣಕಾಸು ಹಾಗೂ ಅಬ್ಕಾರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ (ಆರ್ಥಿಕ ಮತ್ತು ಅಬ್ಕಾರಿ ಮಂತ್ರಿಗಳು). —ಮಾನ್ಯ ಅಧ್ಯಕ್ಷರೆ, ಈ ಕಿಳಕಂಡ ಹೇಳಿಕೆಯನ್ನು ಈ ಬಗ್ಗೆ ನೀಡಬಯಸುತ್ತೇನೆ.